45

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ : **2017-18ನೇ ಸಾಲಿನಲ್ಲಿ 2016-17ನೇ** ಸಾಲಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆಯಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ ಸಹಾಯಧನ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ :

1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ 5-40/2016-BG(G), ದಿನಾಂಕ 30.03.2017.
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 92 ಜೈಅಯೋ 2016, ದಿನಾಂಕ 13.03.2017.
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 92 ಜೈಅಯೋ 2016, ದಿನಾಂಕ 10.02.2017.

**ಪ್ರಸ್ತಾವನೆ :**

ಮೇಲೆ (1)ರಲ್ಲಿ ಓದಲಾದಂತೆ ನವ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಮಂತ್ರಾಲಯ, ನವ ದೆಹಲಿ ರವರು **2016-17ನೇ** ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ **ರೂ.283.666ಲಕ್ಷ** ಕೇಂದ್ರ ಸಹಾಯಧನವನ್ನು **RTGS** ಮೂಲಕ ಕಾರ್ಯಕ್ರಮದ ಉಳಿತಾಯ ಖಾತೆಗೆ ಬಿಡುಗಡೆ ಮಾಡಿದೆ.

**2016-17ನೇ** ಸಾಲಿನನಲ್ಲಿ ಸಾಮಾನ್ಯ ವರ್ಗದಡಿ ನಿಗದಿಪಡಿಸಿದ **9000** ಜೈವಾನಿಲ ಸ್ಥಾವರಗಳ ಭೌತಿಕ ಗುರಿಗೆ **ಮಾರ್ಚ್ 2017ರ ಅಂತ್ಯದವರೆಗೆ 4764** ಜೈವಾನಿಲ ಸ್ಥಾವರಗಳ ಪ್ರಗತಿ ಸಾಧಿಸಿದ್ದು, ಪ್ರಗತಿಗನುಗುಣವಾಗಿ ಕೇಂದ್ರ ಸಹಾಯಧನ, LLP ಹಾಗೂ ಟರ್ನ್ ಕೀ ಫೀ ಸೇರಿದಂತೆ ಒಟ್ಟಾರೆ **ರೂ.496.81ಲಕ್ಷ** ಅನುದಾನದ ಅಗತ್ಯತೆ ಇದೆ.

ಈ ಪೈಕಿ ಓದಲಾದ (2) ಮತ್ತು (3)ರ ಆದೇಶಗಳಲ್ಲಿ **2016-17ನೇ** ಸಾಲಿಗೆ ಸಂಬಂಧಿಸಿದಂತೆ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ **ರೂ.176.32ಲಕ್ಷ** ಕೇಂದ್ರ ಸಹಾಯಧನವನ್ನು ಲಭ್ಯವಿರುವ ಜಿಲ್ಲೆಗಳಿಂದ ಹಿಂಪಡೆದು ತುಮಕೂರು, ಬೆಳಗಾವಿ, ಕಲಬುರಗಿ, ಹಾಗೂ ಬೀದರ್ ಜಿಲ್ಲೆಗಳಿಗೆ ವರ್ಗಾಯಿಸಿದೆ.

ಇದರಿಂದಾಗಿ **2016-17ನೇ** ಸಾಲಿಗೆ ಸಂಬಂಧಿಸಿದಂತೆ ಸಾಮಾನ್ಯ ವರ್ಗದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ ಸಹಾಯಧನ **ರೂ.320.49ಲಕ್ಷ** ಬಿಡುಗಡೆಗೆ ಬಾಕಿ ಇದ್ದು, ಅನುದಾನದ ಲಭ್ಯತೆ ಅನುಸಾರ **ರೂ.283.65ಲಕ್ಷ**ಗಳ ಮಿತಿಗೊಳಪಟ್ಟು ಕೇಂದ್ರ ಸಹಾಯಧನವನ್ನು ಸಂಬಂಧಿತ ಜಿಲ್ಲೆಗಳಿಗೆ **RTGS** ಮೂಲಕ ಬಿಡುಗಡೆ ಮಾಡಲು ಸರ್ಕಾರ ತೀರ್ಮಾನಿಸಿದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/92/ಜೈಅಯೋ/2016 ಬೆಂಗಳೂರು, ದಿನಾಂಕ 03.05.2017.**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ **2016-17ನೇ** ಸಾಲಿನಲ್ಲಿ ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಕಾರ್ಯಕ್ರಮದಡಿ ನಿರ್ಮಿಸಲಾದ ಅನಿಲ ಸ್ಥಾವರಗಳಿಗೆ ಕೇಂದ್ರ ಸಹಾಯಧನ ಪಾವತಿಸಲು **ರೂ.283.65ಲಕ್ಷ(ಇನ್ನೂರಾ ಎಂಬತ್ಮೂರು ಲಕ್ಷದ ಅರವತ್ತೈದು ಸಾವಿರ ರೂಪಾಯಿಗಳು ಮಾತ್ರ)**ಗಳನ್ನು ಇದರೊಂದಿಗೆ ಲಗತ್ತಿಸಿದ ಅನುಬಂಧದಲ್ಲಿ ಹಂಚಿಕೆ ಮಾಡಿದಂತೆ RTGS ಮೂಲಕ ಜಿಲ್ಲಾ ಪಂಚಾಯತ್‌ಗಳಿಗೆ ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಬಿಡುಗಡೆ ಮಾಡಿ ಆದೇಶಿಸಿದೆ.

**ಷರತ್ತು ಮತ್ತು ನಿಬಂಧನೆಗಳು :-**

1. ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನವನ್ನು Rural Development and Panchayath Raj Department(NBMMP), State of India, M.S. Building Branch, Bangalore ಈ ಹೆಸರಿನ ಉಳಿತಾಯ ಖಾತೆಯಿಂದ **RTGS** ಮೂಲಕ ಜಿಲ್ಲಾ ಪಂಚಾಯತ್‌ಗಳ ಕಾರ್ಯಕ್ರಮದ ಉಳಿತಾಯ ಖಾತೆಗೆ ವರ್ಗಾಯಿಸಲಾಗುವುದು.
2. ಪ್ರಧಾನ ವ್ಯವಸ್ಥಾಪಕರು, SBI, M.S. Building Branch, Bangalore ರವರು ಕಾರ್ಯಕ್ರಮದ ಉಳಿತಾಯ ಖಾತೆ ಸಂಖ್ಯೆ **64215755384**ಯಿಂದ ಈ ಆದೇಶದ ಅನುಬಂಧದಲ್ಲಿ ಹಂಚಿಕೆ ಮಾಡಿದ ಅನುದಾನವನ್ನು ಕೂಡಲೇ RTGS ಮೂಲಕ ಸಂಬಂಧಿತ ಜಿಲ್ಲೆಗಳ ಕಾರ್ಯಕ್ರಮದ ಬ್ಯಾಂಕ್ ಖಾತೆಗೆ ವರ್ಗಾಯಿಸುವುದು.
3. ಈ ರೀತಿ ಬ್ಯಾಂಕ್ ಉಳಿತಾಯ ಖಾತೆಯಿಂದ ವರ್ಗಾಯಿಸಲಾದ ಅನುದಾನವನ್ನು ಆಯಾ ಸಾಲಿಗೆ ಸಂಬಂಧಿಸಿದಂತೆ ಉದ್ದೇಶಿತ ಯೋಜನೆಗೆ ತಕ್ಷಣವೇ ವಿನಿಯೋಗಿಸತಕ್ಕದ್ದು. ಯಾವುದೇ ಕಾರಣಕ್ಕೂ ಅನುದಾನವನ್ನು ಮಾರ್ಗಪಲ್ಲಟ ಮಾಡತಕ್ಕದಲ್ಲ.
4. ಒಂದು ವೇಳೆ ಬಿಡುಗಡೆ ಮಾಡಿದ ಅನುದಾನವನ್ನು ಉದ್ದೇಶಿತ ಯೋಜನೆಗೆ ವಿನಿಯೋಗಿಸದೇ ಬ್ಯಾಂಕ್ ಖಾತೆಯಲ್ಲಿ ಇರಿಸಿದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
5. ಸಾಮಾನ್ಯ ವರ್ಗದಡಿ ಹಾಲಿ ಬಿಡುಗಡೆ ಮಾಡುತ್ತಿರುವ ಅನುದಾನದಲ್ಲಿ ಸಾಮಾನ್ಯವಾಗಿ ನಿರ್ಮಿಸುತ್ತಿರುವ 2 ಅಥವಾ 3 ಘ.ಮೀ ಸ್ಥಾವರಗಳಿಗೆ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ರೂ.9000/- ಕೇಂದ್ರ ಸಹಾಯಧನ, ರೂ.1000/- TKF ಮತ್ತು ರೂ.1200/- ರಂತೆ LLP ಗಳಿಗೆ ಪ್ರೋತ್ಸಾಹಧನ ಸೇರಿದಂತೆ ಒಟ್ಟಾರೆ ಲೆಕ್ಕಚಾರ ಮಾಡಿದೆ.
6. ಹಾಲಿ RTGS ಮೂಲಕ ವರ್ಗಾಯಿಸಲಾದ ಅನುದಾನವು ಮಹಾಲೇಖಪಾಲರ **ಲೆಕ್ಕ** ತಪಾಸಣೆಗೊಳಪಟ್ಟಿದೆ ಹಾಗೂ **ಗಾಂಧಿ ಸಾಕ್ಷಿ ಕಾಯಕದಡಿ** ಇಂಧೀಕರಿಸುವ ಷರತ್ತಿಗೆ ಒಳಪಟ್ಟು ಬಿಡುಗಡೆ ಮಾಡಿದೆ.
7. ಪ್ರತಿ 3 ತಿಂಗಳಿಗೊಮ್ಮೆ ಕಾರ್ಯಕ್ರಮದ ಬ್ಯಾಂಕ್ ಖಾತೆಯ Statement ಯನ್ನು ಸರ್ಕಾರಕ್ಕೆ ಸಲ್ಲಿಸುವುದು. ಈ Statement ಯನ್ವಯ ಅನುದಾನದ ಲಭ್ಯತೆ ಕಂಡು ಬಂದಲ್ಲಿ ಕೂಡಲೇ ಲಭ್ಯವಿರುವ ಅನುದಾನವನ್ನು ಹಿಂಪಡೆದು ಅಗತ್ಯವಿರುವ ಜಿಲ್ಲೆಗೆ ಮರು ಹಂಚಿಕೆ ಮಾಡಲಾಗುವುದು.
8. ಈ ರೀತಿ ಮರು ಹಂಚಿಕೆಗಾಗಿ ಅನುದಾನವನ್ನು ಹಿಂಪಡೆದ ಜಿಲ್ಲೆಗಳು ಇನ್ನೊಮ್ಮೆ ಅನುದಾನ ಅಗತ್ಯತೆ ಕುರಿತಂತೆ ಪ್ರಸ್ತಾವನೆಯನ್ನು ಸಲ್ಲಿಸುವಂತಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್. ಕೃಷ್ಣಪ್ಪ)
ನಿರ್ದೇಶಕರು (ಗ್ರಾಮೂಸ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು / ಮುಖ್ಯ ಲೆಕ್ಕಾಧಿಕಾರಿಗಳು.
3. ಪ್ರಧಾನ ವ್ಯವಸ್ಥಾಪಕರು, SBI, M.S. Building Branch, Bangalore.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್) ರವರ ಅಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ.
5. ವಿಶೇಷಾಧಿಕಾರಿ, ಇಲಾಖಾ ಗಣಕ ಕೇಂದ್ರ, ಗ್ರಾಅಪ ಇಲಾಖೆ.
6. ರಕ್ಷಾ ಕಡತಕ್ಕೆ / ಹೆಚ್ಚುವರಿ ಪ್ರತಿ.

ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 92 ಜೈಅಯೋ 2016, ದಿನಾಂಕ 03.05.2017ರ ಲಗತ್ತು.

(ರೂ.ಲಕ್ಷಗಳಲ್ಲಿ)

| ಕ್ರ ಸಂ | ಜಿಲ್ಲೆ | ಸಾಧಿಸಿದ ಪ್ರಗತಿ | | ಸಾಧಿಸಿದ ಪ್ರಗತಿಗೆ ಅಗತ್ಯವಿರುವ ಅನುದಾನ ಕೇಂದ್ರ | | | | ಈಗಾಗಲೇ ಬಿಡುಗಡೆ ಯಾದ ಕೇಂದ್ರ ಅನುದಾನ | ಬಿಡುಗಡೆ ಬಾಕಿ ಇರುವ ಅನುದಾನ | 2015-16ನೇ ಸಾಲಿನಲ್ಲಿ ಲಭ್ಯವಿರುವ ಅನುದಾನ (*) | ಬಿಡುಗಡೆ ಮಾಡಿದ ಅನುದಾನ (10-11) |
|---|---|---|---|---|---|---|---|---|---|---|---|
| | | ಸಾಮಾನ್ಯ | LLP | ಸಾಮಾನ್ಯ | TKF | LLP | ಒಟ್ಟು | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| 1 | ಬಾಗಲಕೋಟೆ | 233 | 38 | 20.97 | 2.33 | 0.46 | 23.76 | | 23.76 | 3.12 | **20.64** |
| 2 | ಬೆಂಗಳೂರು (ಗ್ರಾ) | 216 | 0 | 19.44 | 2.16 | 0.00 | 21.60 | | 21.60 | 1.76 | **19.84** |
| 3 | ಬೆಂಗಳೂರು (ನ) | 39 | 0 | 3.51 | 0.39 | 0.00 | 3.90 | | 3.90 | | **3.90** |
| 4 | ಬೆಳಗಾಂ (**) | 1559 | 1590 | 140.31 | 15.59 | 19.08 | 174.98 | 101.12 | 73.86 | | **43.84** |
| 5 | ಬಳ್ಳಾರಿ | 15 | 0 | 1.35 | 0.15 | 0.00 | 1.50 | | 1.50 | | **1.50** |
| 6 | ಬೀದರ್ | 436 | 0 | 39.24 | 4.36 | 0.00 | 43.60 | 32.45 | 11.15 | | **11.15** |
| 7 | ಚಾಮರಾಜನಗರ | 0 | 0 | 0.00 | 0.00 | 0.00 | 0.00 | | 0.00 | | **0.00** |
| 8 | ಚಿಕ್ಕಬಳ್ಳಾಪುರ | 169 | 0 | 15.21 | 1.69 | 0.00 | 16.90 | | 16.90 | | **16.90** |
| 9 | ಚಿಕ್ಕಮಗಳೂರು | 9 | 0 | 0.81 | 0.09 | 0.00 | 0.90 | | 0.90 | | **0.90** |
| 10 | ಚಿತ್ರದುರ್ಗ | 41 | 0 | 3.69 | 0.41 | 0.00 | 4.10 | | 4.10 | | **4.10** |
| 11 | ದಕ್ಷಿಣ ಕನ್ನಡ | 425 | 0 | 38.25 | 4.25 | 0.00 | 42.50 | | 42.50 | 2.85 | **39.65** |
| 12 | ದಾವಣಗೆರೆ | 131 | 0 | 11.79 | 1.31 | 0.00 | 13.10 | | 13.10 | | **13.10** |
| 13 | ಧಾರವಾಡ | 10 | 0 | 0.90 | 0.10 | 0.00 | 1.00 | | 1.00 | 2.72 | **0.00** |
| 14 | ಗದಗ | 2 | 0 | 0.18 | 0.02 | 0.00 | 0.20 | | 0.20 | | **0.20** |
| 15 | ಹಾಸನ | 95 | 0 | 8.55 | 0.95 | 0.00 | 9.50 | | 9.50 | | **9.50** |
| 16 | ಹಾವೇರಿ | 58 | 0 | 5.22 | 0.58 | 0.00 | 5.80 | | 5.80 | | **5.80** |
| 17 | ಕಲಬುರಗಿ | 475 | 0 | 42.75 | 4.75 | 0.00 | 47.50 | 32.24 | 15.26 | | **15.26** |
| 18 | ಕೊಡಗು | 4 | 0 | 0.36 | 0.04 | 0.00 | 0.40 | | 0.40 | | **0.40** |
| 19 | ಕೋಲಾರ | 45 | 0 | 4.05 | 0.45 | 0.00 | 4.50 | | 4.50 | | **4.50** |
| 20 | ಕೊಪ್ಪಳ | 27 | 0 | 2.43 | 0.27 | 0.00 | 2.70 | | 2.70 | | **2.70** |
| 21 | ಮಂಡ್ಯ | 50 | 0 | 4.50 | 0.50 | 0.00 | 5.00 | | 5.00 | | **5.00** |
| 22 | ಮೈಸೂರು | 7 | 0 | 0.63 | 0.07 | 0.00 | 0.70 | | 0.70 | | **0.70** |
| 23 | ರಾಯಚೂರು | 0 | 0 | 0.00 | 0.00 | 0.00 | 0.00 | | 0.00 | | **0.00** |
| 24 | ರಾಮನಗರ | 66 | 0 | 5.94 | 0.66 | 0.00 | 6.60 | | 6.60 | | **6.60** |
| 25 | ಶಿವಮೊಗ್ಗ | 10 | 0 | 0.90 | 0.10 | 0.00 | 1.00 | | 1.00 | | **1.00** |
| 26 | ತುಮಕೂರು | 86 | 0 | 7.74 | 0.86 | 0.00 | 8.60 | 10.51 | -1.91 | | **0.00** |
| 27 | ಉತ್ತರ ಕನ್ನಡ | 137 | 0 | 12.33 | 1.37 | 0.00 | 13.70 | | 13.70 | | **13.70** |
| 28 | ಉಡುಪಿ | 76 | 0 | 6.84 | 0.76 | 0.00 | 7.60 | | 7.60 | | **7.60** |
| 29 | ವಿಜಯಪುರ | 241 | 73 | 21.69 | 2.41 | 0.88 | 24.98 | | 24.98 | | **24.98** |
| 30 | ಯಾದಗಿರಿ | 102 | 0 | 9.18 | 1.02 | 0.00 | 10.20 | | 10.20 | | **10.20** |
| | **ಒಟ್ಟು** | **4764** | **1701** | **428.76** | **47.64** | **20.41** | **496.81** | **176.32** | **320.49** | **10.45** | **283.65** |

(*) ಕಾಲಂ ನಂ.11ರಲ್ಲಿ ನಮೂದಿಸಿದ ಮೊತ್ತ ರೂ.10.45ಲಕ್ಷವನ್ನು 2016-17ನೇ ಸಾಲಿನಲ್ಲಿ ನಿರ್ಮಿಸಲಾದ ಅನಿಲ ಸ್ಥಾವರಗಳ ಕೇಂದ್ರ ಸಹಾಯಧನ ಪಾವತಿಗಾಗಿ ವಿನಿಯೋಗಿಸುವುದು.

(**) ಅನುದಾನದ ಲಭ್ಯತೆಗೆ ಮಿತಿಗೊಳಿಸಿದೆ.

ನಿರ್ದೇಶಕರು (ಗ್ರಾಮೂಸೌ-2) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.